ಯುದ್ಧ ಮುಗಿದ ಮೇಲೂ ಈ ಕೆಲಸ ನಿಲ್ಲಲಿಲ್ಲ. ಯುದ್ಧಸಂತ್ರಸ್ತರು ಶಿಬಿರಗಳಿಂದ ಪ್ಯಾಲೆಸ್ಟೈನ್‌ಗೆ ವಲಸೆ ಹೋಗಬೇಕಿತ್ತು. ಆಗಿನ್ನೂ ಇಸ್ರೇಲ್ ರೂಪುಗೊಂಡಿರಲಿಲ್ಲ. ಅವರಿಗಾಗಿ ದಾಖಲೆಗಳನ್ನು ಮಾಡಿಕೊಟ್ಟ ಮೇಲೆ ಅಲ್ಜೀರಿಯಾ ಯುದ್ಧದ ಸಂದರ್ಭದಲ್ಲಿ ಅಲ್ಲಿನವರಿಗಾಗಿ ಕೆಲಸಮಾಡಿದ. ಈ ಯುದ್ಧದ ಸಂದರ್ಭದಲ್ಲಿ ವಿಶ್ವದಾದ್ಯಂತ ಅಪ್ಪನ ಹೆಸರು ಓಡಾಡಿತು. ಹಲವರು ಅವನನ್ನು ಹುಡುಕಿಕೊಂಡು ಬಂದರು. ಆಫ್ರಿಕಾದಲ್ಲಿ ಗ್ಯುನಿಯ, ಬಿಸಾಉ, ಅಂಗೋಲಗಳು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದವು. ಆಗ ಅಪ್ಪ ನೆಲ್ಸನ್ ಮಂಡೇಲರ ವರ್ಣಭೇದ ನೀತಿ ವಿರುದ್ಧದ ಪಕ್ಷ ಸೇರಿದ. ದಕ್ಷಿಣ ಆಫ್ರಿಕದ ಕರಿಯರಿಗೆ ದಾಖಲೆಗಳನ್ನು ಮಾಡಿಕೊಟ್ಟ.

ಲ್ಯಾಟಿನ್ ಅಮೆರಿಕ, ಸರ್ವಾಧಿಕಾರದ ವಿರುದ್ಧ ಸೆಟೆದು ನಿಂತ ಡೊಮಿನಿಕನ್ ರಿಪಬ್ಲಿಕ್, ಹೈತಿ, ಬ್ರೆಜಿಲ್, ಅರ್ಜೆಂಟೈನಾ, ವೆನಿಜುವೆಲಾ, ಎಲ್‌ಸಾಲ್ವಡಾರ್, ನಿಕರಾಗುವ, ಕೊಲಂಬಿಯಾ, ಪೆರು, ಉರುಗ್ವೆ, ಚಿಲಿ, ಮೆಕ್ಸಿಕೊ ಹೀಗೆ ಅವನು ಕೆಲಸ ಮಾಡಿದ ದೇಶಗಳ ಪಟ್ಟಿ ಬೆಳೆಯುತ್ತಲೇ ಹೋಯಿತು. ಅಷ್ಟರಲ್ಲಿ ವಿಯಟ್ನಾಂ ಯುದ್ಧ ಶುರುವಾಯಿತು. ಆಗ ಅಪ್ಪ ವಿಯೆಟ್ನಾಂ ವಿರುದ್ಧ ಯುದ್ಧ ಮಾಡಲು ಇಷ್ಟವಿಲ್ಲದ ಅಮೆರಿಕನ್ನರಿಗಾಗಿ ಪತ್ರಗಳನ್ನು ಸಿದ್ಧಮಾಡಿಕೊಟ್ಟ. ಅವನ ಕೈಚಳಕದಿಂದ ಯುರೋಪ್ ಕೂಡ ಹೊರತಾಗಲಿಲ್ಲ. ಸ್ಪೇನ್‌ನಲ್ಲಿ ಫ್ರಾಂಕೋನ ವಿರುದ್ಧ ದನಿಎತ್ತಿದ ಭಿನ್ನಮತೀಯರಿಗೆ, ಪೋರ್ಚುಗಲ್ಲಿನ ಸಲಾಜಾರ್ ವಿರುದ್ಧ ನಿಂತವರಿಗೆ, ಗ್ರೀಸಿನಲ್ಲಿ ಸರ್ವಾಧಿಕಾರವನ್ನು ವಿರೋಧಿಸಿದವರಿಗೆ, ಹಾಗೆ ಫ್ರಾನ್ಸಿನವರಿಗೂ ಅಗತ್ಯ ದಾಖಲೆಗಳನ್ನು ಸೃಷ್ಟಿಸಿಕೊಟ್ಟ. ಹೀಗೆ ಸರಿಸುಮಾರು ಹದಿನೈದು ದೇಶಗಳ ದಾಖಲೆಗಳನ್ನು ಅಗತ್ಯಕ್ಕೆ ತಕ್ಕಂತೆ ಅವನು ಮರುಸೃಷ್ಟಿಸಿದ್ದ.

## ಸಾರಾ ಕಮಿನ್ಸ್ಕಿ

ಈಕೆ ನಟಿ ಹಾಗೂ ಚಿತ್ರಕತೆ ರಚನಕಾರ್ತಿ. ತನ್ನ ತಂದೆ ಅಡೆಲ್ಫೊ ಕಮಿನ್ಸ್ಕಿಯ ಅನುಭವಗಳನ್ನು ಆಧರಿಸಿದ 'A Forger's Life' ಎನ್ನುವ ಪುಸ್ತಕ ಬರೆದಿದ್ದಾಳೆ. ಈಕೆಯ ತಂದೆ ಅಡೆಲ್ಫೋ ಕಮಿನ್ಸ್ಕಿಯ ಬದುಕು ಸಹಜೀವಿಗಳ ಜೀವವನ್ನು ಕಾಪಾಡಲು ಹೋರಾಡಿದ ಅಜ್ಞಾತ ಯೋಧನ ರೀತಿಯದು. ತನ್ನಂತೆ ನಿರಾಶ್ರಿತರಾದವರಿಗೆ ನೆಲೆ ಕಂಡುಕೊಳ್ಳಲು ನಕಲಿ ದಾಖಲಿಗಳನ್ನು ಸೃಷ್ಟಿಸಿ ಅವರನ್ನು ಅವರ ಬದುಕು, ಉಳಿಯುವಿಕೆಗೆ ನೆರವಾಗುತ್ತಾನೆ. ನಿರಂತರವಾಗಿ 30 ವರ್ಷಗಳ ಕಾಲ ಸರಿಸುಮಾರು 15ಕ್ಕೂ ಹೆಚ್ಚು ದೇಶಗಳ ನಕಲಿದಾಖಲೆಗಳನ್ನು ಸೃಷ್ಟಿಸಿ ನಿರಾಶ್ರಿತರಿಗೆ ನೆಲೆ ಕಂಡುಕೊಳ್ಳಲು ನೆರವಾಗುತ್ತಾನೆ.

ಒಮ್ಮೆ ದೇಶಭ್ರಷ್ಟನಾಗಿದ್ದ ಜರ್ಮನಿಯ ಯಹೂದಿ ರಾಜಕಾರಣಿ, ಡೇನಿಯಲ್ ಕೊಹನ್ ಬೆಂಡಿಟ್‌ಗಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟು ಆತ ದೇಶದೊಳಗೆ ಹೋಗಿ ಭಾಷಣ ಮಾಡುವಂತೆ ಮಾಡಿದ. ಒಬ್ಬ ವ್ಯಕ್ತಿಯ ಪ್ರಾಣ ಕಾಪಾಡಲು ಅಲ್ಲ ಬದಲಿಗೆ ಅಧಿಕಾರಶಾಹಿಗಳಿಗೆ ದೇಶದ ಗಡಿಗಳಲ್ಲಿ ಎಷ್ಟು ರಂಧ್ರಗಳಿವೆ ಎಂದು ತೋರಿಸಲು ತಾನು ಇದನ್ನು ಮಾಡಿದ್ದಾಗಿ ಹೇಳುತ್ತಾನೆ. ಅದಕ್ಕಿಂತ